




# ಎನಗಿಂತ ಹಿರಿಯರಿಲ್ಲ!

ಜಾರ್ಜಿಯಾ ದೇಶದಲ್ಲಿರುವ 114 ವರ್ಷದ ಬೀಸ್ ಬೆರ್ರಿ ಕೂಪರ್ ಈಗ ಪ್ರಪಂಚದಲ್ಲೇ ಅತಿ ಹಿರಿಯ ಜೀವಂತ ವ್ಯಕ್ತಿ. ಇದುವರೆಗೂ ಅತ್ಯಂತ ಹಿರಿಯ ವ್ಯಕ್ತಿ ಎಂಬ ಗಿನ್ನಿಸ್ ವಿಶ್ವ ದಾಖಲೆ, ಟೆಕ್ಸಾಸ್‌ನ ಯುವಿನ್ಸ್ ಸ್ಯಾನ್ ಬರ್ನ್ ಎಂಬಾತನದಾಗಿತ್ತು. 31ನೇ ಜನವರಿ 2011ರಲ್ಲಿ ಈತ ತೀರಿಕೊಂಡ ಬಳಿಕ ಬೀಸ್ ಕೂಪರ್ ಗೆ ಈ ಪಟ್ಟ ಲಭಿಸಿದೆ.

ಎಂಟು ಮಕ್ಕಳಲ್ಲಿ ಮೂರನೆಯವಳಾಗಿ ಈಕೆ ಹುಟ್ಟಿದ್ದು 26ನೇ ಆಗಸ್ಟ್ 1896 ರಲ್ಲಿ. ಟೆನ್ನೇಸಿನ್‌ನಲ್ಲಿ ಹುಟ್ಟಿ ಬೆಳೆದು ನಂತರ ಸ್ಕೂಲ್‌ನಲ್ಲಿ ಟೀಚರ್ ಆಗಿ ಜಾರ್ಜಿಯಾಕ್ಕೆ ತೆರಳಿದಳು.1924ರಲ್ಲಿ ಲೂಥರ್ ಕೂಪರ್‌ನೊಂದಿಗೆ ಮದುವೆಯಾಗಿ, ನಂತರ 1963ರಲ್ಲಿ ಪತಿಯ ವಿಯೋಗವಾಯಿತು. ಬೀಸ್ ಕೂಪರ್‌ಗೆ ಒಟ್ಟು 4 ಮಕ್ಕಳು, 12 ಮೊಮ್ಮಕ್ಕಳು, 15 ಮರಿ ಮೊಮ್ಮಕ್ಕಳು ಹಾಗೂ ಒಂದು ಮರಿ–ಗಿರಿ ಮೊಮ್ಮಗು ಇದೆ.

ಈಕೆ ತನ್ನ ಜೀವಿತಾವಧಿಯಲ್ಲಿ ಅಮೆರಿಕಾದ 21 ಜನ ಅಧ್ಯಕ್ಷರನ್ನು ಹಾಗೂ ಎರಡು ವಿಶ್ವ ಮಹಾಯುದ್ಧಗಳನ್ನು ಕಂಡಿದ್ದಾಳೆ! ತನ್ನ 113 ನೇ ಹುಟ್ಟು ಹಬ್ಬದ ಸಮಯದಲ್ಲಿ ಈಕೆಯನ್ನು ಪತ್ರಕರ್ತರು ಪ್ರಶ್ನಿಸಿದಾಗ, 'ಜಂಕ್‌ಫುಡ್ ತಿನ್ನದಿರುವುದು ಹಾಗೂ ತನ್ನ ಕೆಲಸದಲ್ಲಿ ತೊಡಗಿಕೊಂಡಿರುವುದು ತನ್ನ ದೀರ್ಘಾಯುಷ್ಯದ ಗುಟ್ಟು' ಎಂದಿದ್ದಾಳೆ.

■ ವಿದ್ಯಾ ವಿ ಹಾಲಭಾವಿ